13) ಬೆಳಗಾಂ	33	13	6
14) ಬಿಜಾಪುರ	47	62	11
15) ಧಾರವಾಡ	15	30	20
16) ಕಾರವಾರ	18	9	16
17) ಗುಲ್ಬರ್ಗಾ	29	-	-
18) ರಾಯಚೂರು	12	13	20
19) ಬಳ್ಳಾರಿ	13	26	7
20) ಬೀದರ್	11	59	24
ಒಟ್ಟು	476	601	353

ವಿಜಾಪುರ ನಗರಸಭೆ ಹಾಗೂ ನಗರ ಗ್ರಂಥಾಲಯ ಜಂಟಿಯಾಗಿ ನಿರ್ಮಿಸಲಿರುವ ಮಾರುಕಟ್ಟೆ ಸಂಕೀರ್ಣ.

819(131) ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ವಿಜಾಪುರ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ವಿಜಾಪುರ ನಗರಸಭೆ ಹಾಗೂ ನಗರ ಕೇಂದ್ರ ಗ್ರಂಥಾಲಯ ಜಂಟಿಯಾಗಿ ನಿರ್ಮಿಸಬೇಕಾಗಿರುವ ಮಾರುಕಟ್ಟೆ ಸಂಕೀರ್ಣದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

2. ಹಾಗಿದ್ದಲ್ಲಿ ಈಗ ಅದು ಯಾವ ಹಂತದಲ್ಲಿದೆ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :—

1. ಹೌದು

2. ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಂದ್ರದಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಅಭಿವೃದ್ಧಿಗೆ ಬಂದಿರುವ ಹಣ.

820(1227) ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದ ಅಭಿವೃದ್ಧಿ ಸಲುವಾಗಿ ನೀಡಿದ ಹಣವೆಷ್ಟು?

ಅ) ಆದರಲ್ಲಿ ಖರ್ಚಾಗಿರುವ ಮೊತ್ತವೆಷ್ಟು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಪ್ರಸಕ್ತ 1998-99ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿಗಾಗಿ ಒಟ್ಟು ರೂ. 2398.13 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಹಣದಲ್ಲಿ ರೂ. 2209.62 ಲಕ್ಷ ಹಣವನ್ನು ಖರ್ಚು ಮಾಡಲಾಗಿದೆ. ಉಳಿದ 194.51 ಲಕ್ಷ ರೂ.ಗಳನ್ನು ಇಲಾಖೆಗೆ ಮರುಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ವಿರಾಜಪೇಟೆ ತಾಲ್ಲೂಕಿನಲ್ಲಿ ಎಸ್‌ಸಿ : ಎಸ್‌ಟಿರವರಿಗೆ ಸಾಲ ವಿತರಣೆ.

822 (1232) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಿಗೆ ಎಸ್‌ಸಿ : ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ 1996-97 ರಿಂದ 1998-99 ರವರೆವಿಗೆ ಎಷ್ಟು ಮೊತ್ತದ ಎಷ್ಟು ಫಲಾನುಭವಿಗಳಿಗೆ ನೇರ ಅಥವಾ ಇನ್ನಿತರ ಬ್ಯಾಂಕ್ ಮೂಲಕ ಸಾಲ ವಿತರಣೆ ಆಗಿರುತ್ತದೆ. (ವರ್ಷವಾರು ವಿವರ ನೀಡುವುದು)

ಆ) ಈ ಅವಧಿಯಲ್ಲಿ ಸರ್ಕಾರ ನಿಗದಿಪಡಿಸಿದ ಗುರಿ ಎಷ್ಟು? ಹಾಗೂ ಸಾಧನೆ ಎಷ್ಟು?

ಇ) ಕೊಡಗು ಜಿಲ್ಲೆಯ 3 ತಾಲ್ಲೂಕುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಈವರೆವಿಗೆ ಕೊರೆಯಲಾದ ಕೊಳವೆ ಬಾವಿಗಳ ಒಟ್ಟು ಸಂಖ್ಯೆ ಎಷ್ಟು? (ಪ್ರತ್ಯೇಕ ವಿವರ ನೀಡುವುದು).

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ)

ವರ್ಷ	ಫಲಾನುಭವಿಯ ಸಂಖ್ಯೆ ಸಂಖ್ಯೆ	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)
1996-97	15	6.95
1997-98	11	4.36
1998-99 (ಫೆಬ್ರುವರಿ 99)	99	14.77